MC No. 37/2023

RW-1

**(ಇಂದು ದಿಃ 03-05-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಶ್ರೀ.NR ವಕೀಲರಿಂದಃ-**

ನನ್ನ ಮದುವೆ ಅರ್ಜಿದಾರನ ಜೊತೆ ದಿಃ 22-05-2023 ರಂದು ಆಗಿದೆ ಎಂದರೆ ಸರಿ. ನನ್ನ ತವರು ಮನೆ ಭೀಜನಳ್ಳಿ ಮತ್ತು ಅರ್ಜಿದಾರನ ಗ್ರಾಮ ಸೇಡಂ ಎಂದರೆ ಸರಿ. ನನ್ನ ಮತ್ತು ಅರ್ಜಿದಾರನ ಮದುವೆ ಹಿರಿಯರು ನಿಶ್ಚಿಯ ಮಾಡಿದ ಮದುವೆ ಎಂದರೆ ಸರಿ. ನಮ್ಮ ಮದುವೆ ನಿಶ್ಚಿತಾರ್ಥ ಕಾರ್ಯಕ್ರಮ ದಿಃ 16-12-2022 ರಂದು ಆಗಿದೆ ಎಂದರೆ ಸರಿ. ನನ್ನ ಮದುವೆ ಆಗುವ ಮುಂಚೆ ಅರ್ಜಿದಾರ ನಮ್ಮ ಗ್ರಾಮಕ್ಕೆ ಬಂದಿದ್ದರು. ವಿವಾಹ ನಿಶ್ಚಿತಾರ್ಥಿ ಆದ ಒಂದುವರೆ ತಿಂಗಳಿಗೆ ಅರ್ಜಿದಾರ ನನ್ನ ಬಳಿ ಬಂದಿದ್ದರು. ಅರ್ಜಿದಾರ ಹಗಲಿನಲ್ಲಿ ಬಂದಿ ಹೋಗಿದ್ದರು. ಮನೆಯಲ್ಲಿ ನನ್ನ ತಂದೆ ಇರುತ್ತಾರೆ. ಮದುವೆ ಮುಂಚೆ ನನಗೂ ಅರ್ಜಿದಾರನಿಗೂ ದೈಹಿಕ ಸಂಪರ್ಕ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವಿವಾಹ ನಿಶ್ಚಿತಾರ್ಥದ ನಂತರ ನಮ್ಮ ನಡುವೆ ದೈಹಿಕ ಸಂಪರ್ಕ ನಡೆದಿತ್ತು ಎಂದುಹೇಳುತ್ತಾರೆ. ಮದುವೆ ನಂತರ ದಿಃ 24-05-2023 ರಂದು ನಮ್ಮಿಬ್ಬರ ಮೊದಲ ರಾತ್ರಿ ನಿಗತಿಯಾಗಿತ್ತು ಎಂದರೆ ಸರಿ. ನಾನು ಆದಿನ ನನಗೆ ಆರೋಗ್ಯ ಸರಿಯಿಲ್ಲ ಎಂದು ಹೇಳಿ ಮೊದಲರಾತ್ರಿ ನಿರಾಕರಿಸಿದ್ದೆ ಎಂದರೆ ಸರಿಯಲ್ಲ, ದಿಃ 25-05-2023 ರಂದು ಮೊದಲರಾತ್ರಿ ನೇರವೇರಿತು ಎಂದರೆ ಸರಿ. ನಾನು ಅರ್ಜಿದಾರ ಒಂದುವಾರಗಳ ಕಾಲ ಮಾತ್ರ ಸಂಸಾರಿಕ ಜೀವನ ಮಾಡಿದ್ದೇವೆ ಎಂದರೆ ಸರಿ. ತದನಂತರ ನನ್ನ ಆರೋಗ್ಯ ಸರಿಯಿಲ್ಲ ಎಂಬ ಕಾರಣಕ್ಕೆ ನಮ್ಮಿಬ್ಬರ ನಡುವೆ ಸಂಪರ್ಕ ಆಗಿಲ್ಲ ಎಂದರೆ ಸರಿ. 1 ತಿಂಗಳ ನಂತರ ತವರಿಗೆ ಹೋಗಿದ್ದೆ ಎಂದರೆ ಸರಿಯಲ್ಲ, ಹಾಗೇ ಹೋಗಿದ್ದಾಗ ಮಳಖೇಡಾಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆ ಎಂದರೆ ಸರಿಯಲ್ಲ, ವುದುವೆ ಆಗಿ 2 ತಿಂಗಳ ನತಂರ ನಾನು ಅರ್ಜಿದಾರನಿಗೆ ಗರ್ಭವತಿಯಾಗಿದ್ದೇನೆ ಎಂದು ತಿಳಿಸಿದ್ದೆ. ನಾನು Scanning report ಅನ್ನು ಅರ್ಜಿದಾರನಿಗೆ ತೋರಿಸಿರಲಿಲ್ಲ ಎಂದರೆ ಸರಿಯಲ್ಲ, ಸದರಿ Scanning reports ಗಳನ್ನು ನನ್ನ ತವರಿನಲ್ಲಿಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ, ಅರ್ಜಿದಾರ ನಿನ್ನ ಹೊಟ್ಟೆ ದೊಡ್ಡದಾಗಿ ಬಂದಿದ್ದೆ ಎಂದು ಕೇಳಿದಕ್ಕೆ ನಾನು ಕೆಲವರಿಗೆ ಹಾಗೆ ಇರುತ್ತದೆ ಎಂದು ಹೇಳಿದ್ದೆ ಎಂದರೆ ಸರಿ.

ಅರ್ಜಿದಾರ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ನಾನು ಆಸ್ಪತ್ರೆಗೆ ಒಂದು ಬಾರಿ ನನ್ನ ಗಂಡನನ್ನು ಕರೆದುಕೊಂಡು ಹೋಗಿದ್ದೆ. ಡಾ|| ಗೀತಾ ರವರ ಬಳಿ ಕರೆದುಕೊಂಡು ಹೋಗಿದ್ದೆ, ಆದಿನ Scanning ಮಾಡಿಲ್ಲ, ದಿಃ 10-10-2023 ರಂದು ನಾನು ಅರ್ಜಿದಾರನ ಮನೆಯಲ್ಲಿದ್ದಾಗ ಹೊಟ್ಟೆ ನೋವು ಎಂದು ಹೇಳಿದಕ್ಕೆ ನನ್ನ ತಾಯಿಗೆ ಪೋನ ಮಾಡಿದ್ದರು ಎಂದರೆ ಸರಿ. ನನ್ನ ತಾಯಿ ಬಂದ ಬಳಿಕ ಎಲ್ಲರು ಸೇರಿ ಆಸ್ಪತ್ರೆಗೆ ಹೋದೆವು ಎಂದರೆ ಸರಿ. ಆದಿನ ವೈದ್ಯರು

ಕೇಳಿದಾಗ ನಾನು 4 ತಿಂಗಳ ಗರ್ಭಿಣಿ ಎಂದು ಹೇಳಿದ್ದೆ ಎಂದರೆ ಸರಿ. ಆಗ ವೈದ್ಯರು ವರದಿ ನೋಡಿ ನಾನು 9 ತಿಂಗಳ ಗರ್ಭಿಣಿ ಎಂದು ಹೇಳಿದ್ದರು ಎಂದರೆ ಸರಿ. ಸದರಿ ವರದಿಗಳನ್ನು ನನ್ನ ತಾಯಿ ತಂದಿದ್ದರು ಎಂದರೆ ಸರಿಯಲ್ಲ, ನಾನು 9 ತಿಂಗಳ ಗರ್ಭಿಣಿ ಎಂದು ಮೊದಲ ಬಾರಿ ಅರ್ಜಿದಾರನಿಗೆ ದಿಃ 10-10-2023 ರಂದು ಗೊತ್ತಾಯಿತು ಎಂದರೆ ಸರಿಯಲ್ಲ, ನಾನು ಗರ್ಭಿಣಿ ಎಂದು ಮದುವೆ ಆದ 2 ತಿಂಗಳಿಗೆ ಗೊತ್ತಾಗಿದೆ. ಮದುವೆ ಮುಂಚೆ ಪ್ರತಿ ತಿಂಗಳು ನಾನು ರುತುಮತಿ ಆಗುತ್ತಿದ್ದೆ, ಸಾಕ್ಷಿ ಮುಂದುವರೆದು  ಮದುವೆ ಸಮಯದಲ್ಲಿ ಅಶಕ್ತಿಯಾಗಿದ್ದರಿಂದ ಮುಂದೂಡಲ್ಪಟ್ಟಿತ್ತು ಎಂದು ಹೇಳುತ್ತಾರೆ. ನನಗೆ ಗರ್ಬಿಣಿ ಆದ ಸಂಗತಿ ಗೊತ್ತಾದ ಕೂಡಲೆ ಅರ್ಜಿದಾರನಿಗೆ ತಿಳಿಸಬೇಕಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು  ಆಸ್ಪತ್ರೆಗೆ ಹೋಗುವವರೆಗೆ ನಾನು ಗರ್ಭಿಣಿ ಆಗಿರುವ ಸಂಗತಿ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ನಾನುಮದುವೆ ಮುಂಚೆ ಪರಪುರುಷನ ಜೊತೆ ದೈಹಿಕ ಸಂಪರ್ಕ ಹೊಂದಿ ಆತನಿಂದ ಗರ್ಭಿಣಿ ಆಗಿ ಸದರಿ ಸಂಗತಿಯನ್ನು ಮುಚ್ಚಿಟ್ಟು ಮದುವೆ ಆಗಿದ್ದೆ ಎಂದರೆ ಸರಿಯಲ್ಲ, ನಾನು ಮದುವೆ ಆದಾಗ ಸುಮಾರು 5 ತಿಂಗಳ ಗರ್ಭಿಣಿ ಆಗಿದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು  ಸುಮಾರು 2 ತಿಂಗಳು ಗರ್ಭಿಣಿ ಆಗಿದ್ದೆ ಎಂದು ಹೇಳುತ್ತಾರೆ. ಮದುವೆ ಆದ 4 ತಿಂಗಳಿಗೆ ಮಗು ಜನಿಸಿದೆ ಎಂದರೆ ಸರಿ. 9 ತಿಂಗಳು ಪೂರ್ತಿ ಬೆಳೆದ ಮಗು ಜನಿಸಿತ್ತು ಎಂದರೆ ಸರಿ. ನನಗೂ ಮತ್ತು  ಅರ್ಜಿದಾರನಿಗೆ ಮದುವೆ ಮುಂಚೆ ದೈಹಿಕ ಸಂಬಂಧ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 11-10-2023 ರಂದು ಹೆರಿಗೆ ಆದ ನಂತರ ಅರ್ಜಿದಾರ ಆತನ ಗೆಳೆಯ ಭೀಮಶಂಕರ, ಮಲ್ಲಿಕಾರ್ಜುನ ಅರ್ಜಿದಾರ ಅಣ್ಣ ನಾಗಣ್ಣ ನಮ್ಮ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ, ಆಗ ಅರ್ಜಿದಾರನ ಸೋದರತ್ತೆ ಕೂಡ ಬಂದಿದ್ದರು ಎಂದರೆ ಸರಿಯಲ್ಲ, ಆಗ ಅಲ್ಲಿ ಮಾತುಕತೆಯಲ್ಲಿ ಮದುವೆ ಆದ  5 ತಿಂಗಳಿಗೆ ಹೆರಿಗೆ ಆಗುವುದಿಲ್ಲ  ನೀನು ಬೇರೆಯವರಿಂದ ಗರ್ಭಿಣಿ ಆಗಿದ್ದಿಯಾ ಎಂದಿದ್ದಕ್ಕೆ ಹಿರಿಯರು ಮದುವೆ ಆದ 5 ತಿಂಗಳಿಗೆ ಗರ್ಭಿಣಿ ಆಗುವುದಿಲ್ಲ ಎಂಬ ಸಂಗತಿ ಒಪ್ಪಿ ದ್ದರು ಎಂದರೆ ಸರಿ. ಆಗ ನಾನು ಮದುವೆ ಮುಂಚೆ ಅರ್ಜಿದಾರ ನನ್ನ ಜೊತೆ ಸಂಬಂಧ ಹೋಂದಿದ್ದ ಎಂದು ಹೇಳಿದೆ ಎಂದರೆ ಸರಿ. ಆಗ ಹಿರಿಯರು DNA ಪರೀಕ್ಷೆಗೆ ಒಳಗಾಗರು ಎಂದು ಹೇಳಿದರು ಎಂದರೆ ಸರಿ. ಆಗ ನನ್ನ ತಂದೆ ತಾಯಿ DNAಪರೀಕ್ಷೆಗೆ ಒಪ್ಪಲಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆ ತಾಯಿ ಅರ್ಜಿದಾರನ ಜೊತೆ ಗಲಾಟೆ ಮಾಡಿದರು ಎಂದರೆ ಸರಿಯಲ್ಲ, ನನ್ನ ಮೇಲ ಅರ್ಜಿದಾರ ಅನುಮಾನ ಪಡುತ್ತಿದ್ದಾನೆ ಎಂದು ಪೋಲಿಸ ಠಾಣೆಗೆ ದೂರು ನೀಡಿದ್ದೆ ಎಂದರೆ ಸರಿಯಲ್ಲ, ಆಗ ಪೋಲಿಸರು ಅರ್ಜಿದಾರನನ್ನು ಪೋನ ಮೂಲಕ ಕರೆಸಿದ್ದರು

ಎಂದರೆ ಸರಿಯಲ್ಲ. ಠಾಣೆಯಲ್ಲಿ ನಮಿಬ್ಬರ ವಿಷಯ ತಿಳಿದುಕೊಂಡು ಹೇಳಿಕೆಗಳನ್ನು ದಾಖಲಿಸಿಕೊಂಡು ಇಬ್ಬರಿಗೂ ಜಗಳ ಆಗದಂತೆ ಬುದ್ದಿವಾದ ಹೇಳಿದರು ಎಂದರೆ ಸರಿಯಲ್ಲ.

ನ್ಯಾಯಾಲಯದಿಂದ DNA ಪರಿಕ್ಷೆಗೆ ಕಳುಹಿಸಿದ ವರದಿ ಬಂದಿದ್ದು ಅದರಂತೆ ನನ್ನ ಮಗವಿಗೆ ಅರ್ಜಿದಾರ ತಂದೆ ಅಲ್ಲ ಎಂದು ವರದಿ ಬಂದಿದ್ದೆ ಎಂದರೆ ಸರಿಯಲ್ಲ. ನಾನು ಪೋಲಿಸ ಠಾಣೆಯಲ್ಲಿ ಮೊಟರ ಸೈಕಲ ಕೀ ಅನ್ನು ಅರ್ಜಿದಾರನಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಮದುವೆ ಮುಂಚೆ ಬೇರೋಬ್ಬರ ಜೊತೆ ದೈಹಿಕ ಸಂಪರ್ಕ ಹೊಂದಿ ಗರ್ಭಿಣಿ ಆಗಿದ್ದೆ ಕಾರಣ ನಮ್ಮ ಮದುವೆ ಉರ್ಜಿತ ಅಲ್ಲ ಎಂದರೆ ಸರಿಯಲ್ಲ. ಮಗುವಿಗೆ ಅರ್ಜಿದಾರ ತಂದೆ ಅಲ್ಲದಿದ್ದರೂ ಕೂಡ ನಾನು ಸುಳ್ಳು ಸಂಬಂಧ ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹಳ್ಳಿಗಳಲ್ಲಿ ಮದುವೆ ನಿಶ್ಚಯ ಆದ ನಂತರ ವರ ಮತ್ತು ವಧು ಬೇಟಿ ಆಗುವುದು ಅಪರೂಪ ಎಂದರೆ ಸರಿಯಲ್ಲ. ಮದುವೆ ಆದ 5 ತಿಂಗಳ ವರೆಗೆ ನಾನು ಗರ್ಭಿಣಿ ಎಂಬ ಸಂಗತಿ ನನಗೆ ಗೊತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆಯವರಿಂದ ಗರ್ಭಿಣಿ ಆಗಿದ್ದರೂ ಕೂಡ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**